**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಓ ಎಸ್ ನಂ. 199/2022**

**ಡಿ.ಡಬ್ಲ್ಯೂ** 2

**ದಿನಾಂಕಃ13.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಸವಿತಾ ಕಬ್ಬೆರ |
| ತಂದೆಯ ಹೆಸರು | ಲಕ್ಷ್ಮಣ |
| ಉದ್ಯೋಗ | ಪಿ ಡಿ ಓ |
| ವಯಸ್ಸು | 51 ವರ್ಷ |
| ವಾಸಸ್ಥಳ | ಸಂಗಮೇಶ್ವರ |

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ವಿ ಹೆಚ್ ಕೆ ವಕೀಲರಿಂದ**

Stock register ಮತ್ತು Account register ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸದರಿ Stock register ಮತ್ತು Account register ಗಳಲ್ಲಿ ಯಾರಿಂದ ನಗದು ಹಣವನ್ನು ಸಂದಾಯ ಮಾಡಿದ್ದು ಮತ್ತು ಯಾರಿಂದ ಉದ್ದರಿ ಪಡೆದಿದ್ದು ಎಂದು ನಮೂದು ಮಾಡಲಾಗಿದೆ. ಪಿ ಡಿ ಓ ಅಥವಾ ಸೆಕ್ರಟರಿ ಗ್ರಾಮ ಪಂಚಾಯಿತಿ ರವರು ಸದರಿ ವಹಿಗಳಲ್ಲಿ ನಮೂದು ಮಾಡುತ್ತಾರೆ. ಈ ದಾವೆಯಲ್ಲಿರುವ ಮಾಲುಗಳನ್ನು ಹಿಂದೆ ಇದ್ದ ಪಿ ಡಿ ಓ ಮತ್ತು ಸೆಕ್ರಟರಿ ಗ್ರಾಮ ಪಂಚಾಯಿತಿ ರವರು ಸದರಿ Stock register ಮತ್ತು Account register ಗಳಲ್ಲಿ ನಮೂದು ಮಾಡಿದ್ದಾರೆ. ಸದರಿ ವಹಿಗಳಲ್ಲಿ ಯಾರಿಗೆ ಬಾಕಿ ಹಣ ಕೊಡುವುದರ ಬಗ್ಗೆ ಸಹ ಸದರಿ ವಹಿಗಳಲ್ಲಿ ನಮೂದು ಇರುತ್ತದೆ. 2015 ನೇ ಇಸ್ವಿಯಿಂದ ಇಂದಿನ ವರೆಗೂ ಸರಕಾರದಿಂದ ಗ್ರಾಂಟ್ ಬಂದ ನಂತರ ಯಾರಾರಿಂದ ಉದ್ದರಿ ಮಾಲುಗಳನ್ನು ಪಡೆದಿರುತ್ತೇವೆವೊ ಅವರಿಗೆ ಹಣವನ್ನು ಪಾವತಿ ಮಾಡುತ್ತಾ ಬಂದಿರುತ್ತೇವೆ. ಅದೇ ರೀತಿ ವಾದಿಗೂ ಸಹ 2015 ನೇ ಇಸ್ವಿಯ ನಂತರ ಸರಕಾರದಿಂದ ಗ್ರಾಂಟ್ ಬಂದ ನಂತರ ಸದರಿಯರಿಂದ ಉದ್ದರಿ ಮಾಲುಗಳನ್ನು ಪಡೆದ ಕುರಿತು ಬಾಕಿ ಹಣ ಕೊಡುತ್ತಾ ಬಂದಿರುತ್ತೇವೆ. ಸಾಕ್ಷಿಯು ಮುಂದುವರೆದು ಹಣ ಬಾಕಿ ಇದ್ದರೂ ಸಹ ಗ್ರಾಮ ಪಂಚಾಯಿತಿಯಲ್ಲಿ ಸದರಿ

ಬಾಕಿ ಸಂಬಂಧ ದಾಖಲೆಗಳು ಇದ್ದರೆ ಅಷ್ಟೇ ಹಣವನ್ನು ಪಾವತಿ ಮಾಡುರುವುದಾಗಿ ನುಡಿಯುತ್ತಾರೆ. ದಾವಾ ಕ್ಲೇಮ್ ನ್ನು ಹೊರತುಪಡಿಸಿ ಎಲ್ಲಾ ಹಿಂದಿನ ಹಣವನ್ನು ಪಾವತಿ ಮಾಡುತ್ತಾ ಬಂದಿರುತ್ತೇವೆ.

ಸಾಕ್ಷಿಗೆ ನಿಪಿ-2 ನ್ನು ತೋರಿಸಿ 2020 ನೇ ಇಸ್ವಿಯಲ್ಲಿ ಅದರಲ್ಲಿರುವ ನಮೂದಾಗಿರುವ ಎಲ್ಲಾ ಮಾಲುಗಳನ್ನು ಉಪಯೋಗಿಸಿ ಬೋರ್‌ವೆಲ್ ಮುಖಾಂತರ ನೀರನ್ನು ಸರಬರಾಜು ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ನಿಪಿ-3 ಮತ್ತು ನಿಪಿ-7 ನ್ನು ತೋರಿಸಲಾಗಿ ಸದರಿ ತಿಳುವಳಿಕೆ ಪತ್ರಗಳ ಪ್ರಕಾರ ನೀವು ವಾದಿಗೆ ಹಣವನ್ನು ಪಾವತಿ ಮಾಡಿದ್ದಿರಾ ಎಂದರೆ ಸಾಕ್ಷಿಯು ತನಗೆ ಕ್ಲಾರಿಪಿಕೇಶನ್ ಇಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-3 ಮತ್ತು 7 ತಿಳುವಳಿಕೆ ಪತ್ರಗಳಿಗೆ ಉತ್ತರವನ್ನು ನೀಡಿದ್ದಿರಾ ಎಂದರೆ ಸಾಕ್ಷಿಯು ತನಗೆ ಕ್ಲಾರಿಪಿಕೇಶನ್ ಇಲ್ಲ ಎಂದು ನುಡಿಯುತ್ತಾರೆ.

ಹಣವನ್ನು ಬಹಳ ದಿನ ಬಾಕಿ ಇದ್ದು ಅದನ್ನು ಪಾವತಿ ಮಾಡದೇ ಇದ್ದಲ್ಲಿ ಸದರಿ ಬಾಕಿ ಇರುವ ಹಣಕ್ಕೆ ಶೇಕಡಾ 18% ವಾರ್ಷಿಕ ಬಡ್ಡಿಯನ್ನು ಸೇರಿಸಿ ಮರು ಪಾವತಿ ಮಾಡಬೇಕೆಂದು ಈ ವ್ಯಾಪ್ತಿಯ ವಾಣಿಜ್ಯ ಪದ್ಧತಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ವಾದಿಗೆ ದುಡ್ಡು ಕೊಡುವುದರ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯ ಪ್ರಕಾರ ವಾದಿಗೆ ಹಣ ಕೊಡುವುದು ಬಾಕಿ ಇರುವುದರ ಬಗ್ಗೆ ನನಗೆ ತಿಳಿದಿದ್ದರು ಸಹ ಇಂದು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯ ವ್ಯವಹಾರದ ಬಗ್ಗೆ ಮಾಹಿತಿ ಇರುವ ಅಂದಿನ ಪಿಡಿಓ, ಸೆಕ್ರಟರಿ ಅಥವಾ ಅಧ್ಯಕ್ಷರರವನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸುತ್ತಿರಾ ಎಂದರೆ ಸಾಕ್ಷಿಯು ಒಬ್ಬ ವಾಟರ್‌ಮ್ಯಾನ್ ರವನ್ನು ಸಾಕ್ಷಿ ಮಾಡಿಸುತ್ತೇನೆ ಎಂದು ನುಡಿಯುತ್ತೇನೆ. ನಾನು ಹಿಂದಿನ ಸಾಕ್ಷ್ಯದಲ್ಲಿ ''ಗುತ್ತಿಗೆ'' ಹಣವೆಂದು ಹೇಳಿಲ್ಲ ಆದರೆ ''ಬಾಕಿ ಹಣ'' ಎಂದು ಹೇಳಿರುತ್ತೇನೆ. ವಾದಿಗೆ ಹಣ ಕೊಡುವುದು ಬಾಕಿ ಇದ್ದ ಸಹ ವಾದಿಗೆ ಆಗದೇ ಇರುವ ವ್ಯಕ್ತಿಗಳ ಮಾತನ್ನು ಕೇಳಿಕೊಂಡು ಇಂದು ನ್ಯಾಯಾಲಯದ ಮುಂದೆ ಹಣ ಮರುಪಾವತಿ ಮಾಡುವ ವಿಷಯವನ್ನು ಅಲ್ಲಗಳೆದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**